

ದೇವನೂರ ಮಹದೇವರ
ಕಥೆಗಳು, ಕಾದಂಬರಿಗಳು

ಉದಯಕುಮಾರ್ ಹಬ್ಬು

ದೇವನೂರ ಮಹಾದೇವರ

ಕಥೆಗಳು, ಕಾದಂಬರಿಗಳು

ಮುನ್ನುಡಿ

◆

ಕನ್ನಡ ಸಾಹಿತಿ ಉದಯಕುಮಾರ್ ಹಬ್ಬು ಅವರು ಕತೆ, ಕವಿತೆ ಮತ್ತು ಕಾದಂಬರಿ ಪ್ರಕಾರಗಳಲ್ಲಿ ಹೆಚ್ಚು ಸೃಜನಶೀಲರಾಗಿದ್ದವರು. ಆದರೆ ಸಾಹಿತ್ಯ ಚಿಂತನೆ ಮತ್ತು ವಿಮರ್ಶೆ ಯಾವಾಗಲೂ ಅವರನ್ನು ಸೆಳೆಯುತ್ತಿದ್ದ ಕ್ಷೇತ್ರವೆನ್ನುವುದನ್ನು ನಾನು ಬಲ್ಲೆ. ಅಲ್ಲಲ್ಲಿ ಪ್ರಬಂಧ ಮಂಡನೆಗಳು, ಕೃತಿ ವಿಮರ್ಶೆ, ಚರ್ಚೆ ಇಂತಹ ಚಟುವಟಿಕೆಗಳಲ್ಲಿ ಹಿನ್ನೆಲೆಯ ಶ್ರುತಿಯಂತೆ ಮಿಡಿಯುತ್ತಿದ್ದ ಸಾಹಿತ್ಯ ಚಿಂತನೆಯ ಆಸಕ್ತಿಯನ್ನು ಅವರು ಇತ್ತೀಚೆಗೆ ಪ್ರಧಾನ ನೆಲೆಗೆ ತರುವುದಕ್ಕೆ ಮುಂದಾಗಿದ್ದಾರೆ. ಕನ್ನಡ ಸಾಹಿತ್ಯದ ಗಂಭೀರ ಮರು ಓದಿನಲ್ಲಿ ತೊಡಗಿಕೊಂಡು, ತಮ್ಮ ಕಾಣ್ಕೆಯನ್ನು ಪುಸ್ತಕಗಳ ರೂಪದಲ್ಲಿ ಓದುಗರ ಮುಂದಿಡುವ ದಾರಿಯನ್ನು ಅವರು ಹಿಡಿದಿದ್ದಾರೆ. ಇಂತಹ ಪ್ರಯೋಗಶೀಲತೆಯಲ್ಲಿ ಅವರು ಆರಿಸಿಕೊಡ ಮುಖ್ಯ ಸಾಹಿತಿ ದೇವನೂರ ಮಹಾದೇವ.

ದೇವನೂರ ಮಹಾದೇವ ಕನ್ನಡದ ವಿಶಿಷ್ಟ ಲೇಖಕ ಎನ್ನುವುದು, ಅವರ ಬರವಣಿಗೆಗಳಲ್ಲಿ ದಲಿತ ಸಂವೇದನೆ ಅನ್ನುವುದು ಅನನ್ಯ ರೀತಿಯಲ್ಲಿ ಅಭಿವ್ಯಕ್ತಗೊಂಡಿರುವುದು ಉದಯಕುಮಾರ್ ಹಬ್ಬು ಅವರನ್ನು ಬಹುವಾಗಿ ಸೆಳೆದಿದೆ. ಆಂಗ್ಲ ಸಾಹಿತ್ಯದ ಅಧ್ಯಯನದ ಹಿನ್ನೆಲೆಯ ಉದಯಕುಮಾರ್ ಹಬ್ಬು, ತಮ್ಮ ವಿಮರ್ಶಾ ಸಲಕರಣೆಗಳನ್ನು ಬಳಸಿ ದೇವನೂರ ಮಹಾದೇವ ಅವರ ಕೃತಿಗಳ ಸಹೃದಯ ವಿಮರ್ಶಾವನಲೋಕವನ್ನು ಈ ಕೃತಿಯಲ್ಲಿ ಮಾಡಿಕೊಟ್ಟಿದ್ದಾರೆ. ದೇವನೂರ ಮಹಾದೇವ ಅವರ ಕೊಡುಗೆ ಏನು ಎನ್ನುವುದನ್ನು ಗುರುತಿಸಲು ಪ್ರಯತ್ನಿಸಿದ್ದಾರೆ.

ಸಾಹಿತಿಗಳ ಸಮಗ್ರ ಬರವಣಿಗೆಯನ್ನು ಅವಲೋಕಿಸುವ ಕೃತಿಗಳು ಕನ್ನಡದಲ್ಲಿ ಹೆಚ್ಚಾಗಿ ಬರಬೇಕಿದೆ. ಇಂತಹ ಸಂದರ್ಭದಲ್ಲಿ ಬಂದಿರುವ ಉದಯಕುಮಾರ ಹಬ್ಬು ಅವರ ಕೃತಿ ಸ್ವಾಗತಾರ್ಹವಾಗಿದೆ.

ಡಾ. ಬಿ. ಜನಾರ್ದನ ಭಟ್

ಮೆಚ್ಚುನುಡಿ

◆

ದೇವನೂರು ಮಹಾದೇವರು ಕನ್ನಡ ಸಾಹಿತ್ಯ ಚರಿತ್ರೆಯ ಕಥಾ ಕ್ಷೇತ್ರದಲ್ಲಿ ಅತಿ ಮಹತ್ವದ ಸ್ಥಾನವನ್ನು ಪಡೆದ ಮಹಾನ್ ಸಾಹಿತಿ. ಅವರನ್ನು ಕುರಿತು ಸಾಕಷ್ಟು ಪುಸ್ತಕಗಳು ಬಂದಿವೆ. ಆದರೂ ವಿಮರ್ಶಕರಿಗೆ ಮಹಾದೇವರ ಕತೆಯ ವಿಮರ್ಶೆಯ ದಾಹ ಇನ್ನೂ ತಣಿದಿಲ್ಲ. ಇನ್ನೂ, ಇನ್ನೂ ಹೆಚ್ಚೆಚ್ಚು ಅರ್ಥವನ್ನು ಮೊಗೆದು ಕೊಡುತ್ತಲೆ ಇದೆ ದೇವನೂರರ ಕಥಾ ಸಾಹಿತ್ಯ. ಉದಯಕುಮಾರರ ಈ ಕೃತಿ **'ದೇವನೂರ ಮಹಾದೇವರ ಕಥೆಗಳು, ಕಾದಂಬರಿಗಳು'** ದೇವನೂರರನ್ನು ಅರ್ಥೈಸುವ ಇನ್ನೊಂದು ಬಗೆಯ ಪ್ರಯತ್ನ. ಹೊಸ ವಿಚಾರಗಳನ್ನು, ಹೊಸ ಒಳನೋಟವನ್ನು ಲೇಖಕ ಉದಯಕುಮಾರ ಹಬ್ಬು ಅವರು ಕೊಟ್ಟಿದ್ದಾರೆ. ಇನ್ನೂ ಹೆಚ್ಚಿನ ಅಧ್ಯಯನಕ್ಕೆ ಪಕ್ಕಾಗುವ ಕೃತಿಗಳು ದೇವನೂರು ಮಹಾದೇವರ ಕೃತಿಗಳಾಗಿವೆ. ಹಲವಾರು ವಿಮರ್ಶಕರ ಗ್ರಂಥಗಳನ್ನು ಪರಿಶೀಲಿಸಿ ಗಂಭೀರ ಅದ್ಯಯನ ನಡೆಸಿದ ಉದಯಕುಮಾರ ಹಬ್ಬು ಅವರನ್ನು ನಾವು ಅಭಿನಂದಿಸಲೇಬೇಕಿದೆ. ಈಗಾಗಲೇ ಕವಿ, ಕಥೆಗಾರ, ಕಾದಂಬರಿಕಾರರೆಂದು ಪ್ರಸಿದ್ಧರಾದ ಉದಯಕುಮಾರರಿಗೊಂದು ತುರಾಯಿ ಈ ಪರಾಮರ್ಶೆ ಎನ್ನಬೇಕಾಗಿದೆ. ಕೃತಿನಿಷ್ಠ ವಿಮರ್ಶಕರಾಗಿ ಈ ಕೃತಿಯಲ್ಲಿ ಮೂಡಿ ಬಂದಿದ್ದಾರೆ.

– ರವಿಚಂದ್ರ

ಲೇಖಕನ ಮಾತುಗಳು

◆

ಈ ಕೃತಿಯನ್ನು ಹೊರತರಲು ಪ್ರೇರೇಪಿಸಿದ ದೇವನೂರರ ಕೃತಿಗಳಿಗೆ. ಬದುಕಿನ ಹೊಸ ಆಯಾಮವನ್ನು ಅರಿಯಲು ಕಣ್ತೆರಿಸಿದ ದೇವನೂರರ ಕಥಾ ಸಾಹಿತ್ಯಕ್ಕೆ ಕೃತಜ್ಞತೆಗಳು. ಈ ಕೃತಿಯನ್ನು ಪರಿಷ್ಕರಿಸಲು ಎಚ್ಚರಿಸಿದ ವಿಮರ್ಶಕರಾದ ಜನಾರ್ದನ ಭಟ್ಟರಿಗೆ.

ನನ್ನ ಎಲ್ಲ ಸಾಹಿತ್ಯ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸಿ ನನ್ನನ್ನು ಬೆಳೆಯಲು ಅವಕಾಶ ಮಾಡಿಕೊಟ್ಟ ಕಾಂತಾವರದ ಅಲ್ಲಮರಾದ ಡಾ. ಮೊಗಸಾಲೆ ಅವರಿಗೆ.

ಸಕಾಲದಲ್ಲಿ ಮುದ್ರಿಸಿ ಚಂದಗಾಣಿಸಿ ಕೊಟ್ಟ ಕೀರ್ತನ್ ಗ್ರಾಫಿಕ್ಸ್, ಮೈಸೂರು ಇವರಿಗೆ–

ನನ್ನ ಈ ಕೃತಿಯಲ್ಲಿ ವಿಶೇಷ ಆಸಕ್ತಿ ವಹಿಸಿ ಪ್ರಕಾಶನಗೊಳಿಸಿದ 'ಮಾನಸ ಬುಕ್ ಹೌಸ್'ನ ಸಂಚಾಲಕರಾದ ಮಾನಸ ಅವರಿಗೆ

ನನ್ನ ಈ ಬರವಣಿಗೆ ಎಂಬ ಹಿಂಸೆಯನ್ನು ತಡೆದುಕೊಂಡು ಸಹಿಸಿಕೊಂಡ ನನ್ನ ನಲ್ಮೆಯ ಸಹಧರ್ಮಿಣಿ ಪ್ರತಿಭಾ ಅವರಿಗೆ ಕೃತಜ್ಞತೆಗಳು.

ಉದಯಕುಮಾರ ಹಬ್ಬು
ಕಿನ್ನಿಗೋಳಿ, ಮಂಗಳೂರು–574150
ಸಂಚಾರಿವಾಣಿ : 9902761720

ಪರಿವಿಡಿ

◆

- ಮುನ್ನುಡಿ 5
- ಮೆಚ್ಚುನುಡಿ 6
- ಲೇಖಕನ ಮಾತುಗಳು 7

ಪ್ರಸ್ತಾವನೆ

- ದಲಿತ ಸಾಹಿತ್ಯ ನಡೆದು ಬಂದ ದಾರಿ 9

ಸಣ್ಣ ಕಥೆಗಳು

- ದ್ಯಾವನೂರು 27
- ಮಾರಿಕೊಂಡವರು 31
- ಗ್ರಸ್ಥರು 35
- ಒಂದು ದಹನದ ಕತೆ 39
- ದತ್ತು 44
- ಡಾಂಬರು ಬಂದುದು 52
- ಮೂಡಲ ಸೀಮೆಲಿ ಕೊಲೆ, ಗಿಲೆ ಮುಂತಾಗಿ... 59
- ಅಮಾಸ 65

ಕಾದಂಬರಿಗಳು

- ಒಡಲಾಳ 79
- ಕುಸುಮಬಾಲೆ 94

***

- ಉಪಸಂಹಾರ 113
- ದಲಿತ ಸಮಾಜದ ಒಳ ವಿಮರ್ಶಕ 123
- ದೇವನೂರ ಮಹದೇವರ ಸಣ್ಣಕಥೆಗಳು 127